ಕರ್ನಾಟಕ ವಿಧಾನ ಪರಿಷತ್ತು

1.	**ಚುಕ್ಕೆ ಗುರುತಿಲ್ಲದ ಪ್ರಶ್ನೆ**	:	**1777**
2.	**ವಿಧಾನ ಪರಿಷತ್ತು ಸದಸ್ಯರ ಹೆಸರು**	:	**ಶ್ರೀ.ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)**
3.	**ಉತ್ತರಿಸುವ ಸಚಿವರು**	:	**ತೋಟಗಾರಿಕೆಮತ್ತುರೇಷ್ಮೆಸಚಿವರು**
4.	**ಉತ್ತರಿಸಬೇಕಾದ ದಿನಾಂಕ**	:	**19-03-2021**

ಕ್ರ ಸಂ	**ಪ್ರಶ್ನೆ**	**ಉತ್ತರ**
ಅ)	ರಾಜ್ಯದ ಬಹುತೇಕ ರೈತರು ಬೆಳೆಯುವ ಆಲೂಗಡ್ಡೆ, ಟೊಮ್ಯಾಟೊ, ಈರುಳ್ಳಿ, ಬದನೆಕಾಯಿ ಮುಂತಾದ ಕಾಯಿಪಲ್ಯಗಳ ಬೆಳೆಗಳಿಂದ ಲಾಭದಾಯಕವಾಗಿಲ್ಲದ ವ್ಯವಸಾಯ ಆಗಿರುವ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವುದಾದರೂ ಸಮೀಕ್ಷೆ ನಡೆಸಿವೆಯೇ; (ವಿವರ ನೀಡುವುದು)	ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಲಾಭದಾಯಕವಾಗಿಲ್ಲದ ವ್ಯವಸಾಯ ಆಗಿರುವ ಕುರಿತು ಸಮೀಕ್ಷೆ ಕೈಗೊಂಡಿರುವುದಿಲ್ಲ.
ಆ)	ಈ ಬೆಳೆಗಳಿಗೆ ದೊರೆಯುವ ಅತಿ ಕಡಿಮೆ ಬೆಲೆಯ ಸಮಸ್ಯೆ ಬಗ್ಗೆ ಸರ್ಕಾರ ಅದನ್ನು ಸರಿಪಡಿಸಲು ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)	ಬೆಳೆಗಳಿಗೆ ದೊರೆಯುವ ಅತಿ ಕಡಿಮೆ ಬೆಲೆಯ ಸಮಸ್ಯೆ ಉಂಟಾದಾಗ ಅದನ್ನು ಸರಿಪಡಿಸಲು ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. 1. ವಿಸ್ತೀರ್ಣ, ಉತ್ಪಾದನೆ, ಬೇಡಿಕೆ ಹಾಗೂ ಪೂರೈಕೆಗಳನ್ನು ಅವಲೋಕಿಸಿ, ಮಾರುಕಟ್ಟೆ ಪರಿಸ್ಥಿತಿಯನ್ನು ಪರಿಗಣಿಸಿ **ಮಾರುಕಟ್ಟೆ ಮಧ್ಯೆ ಪ್ರವೇಶ(MIS)** ಯೋಜನೆಯನ್ನು ಜಾರಿಗೊಳಿಸಲು ಕ್ರಮವಹಿಸಲಾಗುತ್ತಿದೆ. ಈ ಯೋಜನೆಯಡಿ **ಮಾರುಕಟ್ಟೆ ಮಧ್ಯೆ ಪ್ರವೇಶ(MIS) ವನ್ನು** ನೀಡಲಾಗುತ್ತಿದೆ. 2. ಬೆಲೆ ಕೊರತೆ ಪಾವತಿ ಯೋಜನೆಯನ್ನು ಜಾರಿಗೊಳಿಸಿ ಮಾರುಕಟ್ಟೆ ಬೆಲೆ ಮತ್ತು ಸರ್ಕಾರವು ನಿಗಧಿಪಡಿಸಿರುವ ಬೆಲೆಗಳ ವ್ಯತ್ಯಾಸದ ಮೊತ್ತವನ್ನು ಪಾವತಿಸಲಾಗುತ್ತಿದೆ.
ಇ)	ಕೇಂದ್ರ ರಾಜ್ಯ ಸರ್ಕಾರಗಳಿಂದ ಸ್ಥಾಪಿತವಾಗಿರುವ ಬೆಲೆ ಅನುವರ್ತನಿಧಿ (Price Stabilzation Fund) ಯಿಂದ ಎಷ್ಟರ ಮಟ್ಟಿಗೆ ಯಾತನೆ ಮಾರಾಟ (Distress sale) ದಿಂದ ಪಾರು ಮಾಡಲು ಸಾಧ್ಯವಾಗಿದೆ; (ವಿವರ ಒದಗಿಸುವುದು)	ಕೇಂದ್ರ ಸರ್ಕಾರದ ಬೆಲೆ ಸ್ಥಿರೀಕರಣ ನಿಧಿ(Price Stabilation Fund) ಯೋಜನೆಯಡಿಯಲ್ಲಿ ಖರೀದಿಸಲಾಗಿರುವ ಉತ್ಪನ್ನಗಳ ವಿವರ ಕೆಳಗಿನಂತಿದೆ:

ವರ್ಷ	ಉತ್ಪನ್ನ	ಖರೀದಿಸಿದ ಪ್ರಮಾಣ (ಕ್ವಿಂಟಾಲ್ ಗಳಲ್ಲಿ)	ರೈತ ಫಲಾನುಭವಿಗಳ ಸಂಖ್ಯೆ
2016-17	ತೊಗರಿ	31,32,372	127730
2019-20	ತೊಗರಿ	782114	94477

ಈ)	ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬೆಳೆಗಳನ್ನು ಬೆಳೆದು ಪದೆ ಪದೆ ತೊಂದರೆ ಗೊಳಗಾಗುವ ರೈತರಿಗೆ ಮಾರ್ಗೋಪಾಯಗಳನ್ನು ನೀಡಲು ಮತ್ತು ಯಾತನೆ ಮಾರಾಟದಿಂದ ಮುಕ್ತಿಗೊಳಿಸಲು ಶಾಶ್ವತ ಕೃಷಿ ಆಯೋಗವನ್ನು ಸ್ಥಾಪಿಸುವ ಉದ್ದೇಶವಿದೆಯೇ? (ಸಂಪೂರ್ಣ ಮಾಹಿತಿ ನೀಡುವುದು)	ಈಗಾಗಲೇ ಕೇಂದ್ರ ಸರ್ಕಾರವು ಕೃಷಿ ಬೆಲೆ ಮತ್ತು ವೆಚ್ಚ ಆಯೋಗವನ್ನು ಮತ್ತು ರಾಜ್ಯ ಸರ್ಕಾರವು ಕರ್ನಾಟಕ ಕೃಷಿ ಬೆಲೆ ಆಯೋಗವನ್ನು ಸ್ಥಾಪಿಸಿರುತ್ತದೆ. ಪ್ರಸ್ತುತ ಶಾಶ್ವತ ಕೃಷಿ ಆಯೋಗವನ್ನು ಸ್ಥಾಪಿಸುವ ಉದ್ದೇಶ ಇರುವುದಿಲ್ಲ.

Horti181 HGM 2021

(ಮುನಿರತ್ನ)
ತೋಟಗಾರಿಕೆ ಮತ್ತು ಯೋಜನೆ,
ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಸಚಿವರು